C.R.P.67

| Form No.4 (Civil) Deposition Sheets (R.P.No.57) |
|---|

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ- 5 ಪಿ. ಡಬ್ಲ್ಯೂ -5

ದಿನಾಂಕ : 18.01.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಪವನ್ ಕುಮಾರ್ ಜಿ. ಪಿ. |
| ತಂದೆಯ ಹೆಸರು | ಲೇಟ್ ಪುಟ್ಟಸ್ವಾಮಿ |
| ವಯಸ್ಸು | 37 ವರ್ಷ |
| ಉದ್ಯೋಗ | ಹಾಲಿನ ವ್ಯಾಪಾರ |
| ವಾಸ | ಗೆಜ್ಜಲಗರೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನ್ನ ಹೆಸರಿನಲ್ಲಿ ಹಾಲಿನ ವಾಹನದ ಟೆಂಡರ್ ತೆಗೆದುಕೊಂಡಿದ್ದ ಮೃತ ಹೇಮಂತ್ ಕುಮಾರ ನನಗೆ ಗೊತ್ತಿತ್ತು. ನನ್ನ ಹೆಸರಿನಲ್ಲಿ ಹೇಮಂತ್ ಕುಮಾರ್ ಹಾಲಿನ ವಾಹನದ ಟೆಂಡರ್ ತೆಗದುಕೊಳ್ಳುವ ಮೊದಲು ಇಂದು ಕುಮಾರ್ ಬೇರೆಯವರ ಹೆಸರಿನಲ್ಲಿ ಟೆಂಡರ್ ತೆಗೆದುಕೂಂಡು ಹಾಲಿನ ವಾಹನ ಚಲಾಯಿಸುವ ಕಾರ್ಯ ನಿರ್ವಹಿಸುತ್ತಿದ್ದನು. ಫಿರ್ಯಾದಿ ಸದರಿ ಹೇಮಂತ್ ಕುಮಾರನ ತಂದೆ ಹಾಗೂ ಚಾಸಾ-2 ರವಿ ಮೃತ ಹೇಮಂತ್ ಕುಮಾರನ ಚಿಕ್ಕಪ್ಪ. ಚಾಸಾ-4 ಅಭಿನಯ ಸಹ ಡೈರಿಯ ಹಾಲಿನ ಟೆಂಡರ್ ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತಾನೆ. ಚಾಸಾ-6 ರಿಂದ 9 ನಮ್ಮ ಊರಿನವರಾಗಿದ್ದು, ನನಗೆ ಅವರುಗಳ ಪರಿಚಯವಿದೆ. ಆರೋಪಿಗಳ ಪೈಕಿ ಆರೋಪಿ-1 ಇಂದುಕುಮಾರ್, 5ನೇ ಆರೋಪಿ ಪುಟ್ಟ ಅಲಿಯಾಸ್ ಪ್ರಸಾದ್ ಹಾಗೂ 6ನೇ ಆರೋಪಿ ಸ್ವರೂಪ್ ನಮ್ಮ ಊರಿನವರಾಗಿದ್ದು, ನನಗೆ ಅವರುಗಳು ಗೊತ್ತು.

2. ದಿ: 09.05.2021 ರಂದು ರಾತ್ರಿ 7.00 ರಿಂದ 7.15 ರ ಸಮಯದಲ್ಲಿ ನಾನು ಡೈರಿಯಿಂದ ಮನೆಗೆ ಹೋಗುತ್ತಿದ್ದ ಸಮಯದಲ್ಲಿ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ಹೇಮಂತ್ ಕುಮಾರ ಹಾಗೂ ಇಂದು ಕುಮಾರನ ನಡುವೆ ಜಗಳವಾಗುತ್ತಿತ್ತು. ಸದರಿ ಜಗಳ ಮುಗಿದು ಸಾಕ್ಷಿ ತಮ್ಮೇಗೌಡ ಹಾಗೂ ಮೋಹನ ಜಗಳವನ್ನು ಬಿಡಿಸಿ ಕಳುಹಿಸುವ ಸಮಯದಲ್ಲಿ ನಾನು ಸದರಿ ಸ್ಥಳದಲ್ಲಿ ಇದ್ದೆನು. ಆ ಸಮಯದಲ್ಲಿ ಇಂದು ಕುಮಾರನು ನನ್ನನ್ನು ಕುರಿತು ನೀನು ಬಚಾವಾಗಿದ್ದೀಯಾ ಇನ್ನು 2-3 ದಿನಗಳಲ್ಲಿ ಹೇಮಂತ್ ನಿಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿದನು. ಸಂತೋಷ್ ಹಾಗೂ ಇಂದು ಕುಮಾರನ ನಡುವೆ ಕ್ರಿಕೆಟ್

ಟೂರ್ನಮೆಂಟ್ ವಿಚಾರದಲ್ಲಿ ಜಗಳವಾಗಿದ್ದು, ಆ ವಿಚಾರಕ್ಕೆ ಹೇಮಂತ್ ಮತ್ತು ಇಂದು ಕುಮಾರ ನಡುವೆ ಆ ದಿನ ಜಗಳವಾಗುತ್ತಿತ್ತು. ನಂತರ ನಾನು ಸ್ಥಳದಿಂದ ಹೊರಟು ಹೋದೆನು.

3. ಮರುದಿನ ಅಂದರೆ 10ನೇ ತಾರೀಖಿನಂದು ರಾತ್ರಿ 9.00 ರಿಂದ 9.30ರ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಹೇಮಂತನ ಕೊಲೆ ಮಾಡಿ ಆತನ ಸಾವು ಆಗಿದೆ ಎಂದು ಊರಿನ ಜನ ನಮ್ಮ ನನಗೆ ಹೇಳಿದ್ದರಿಂದ ಗೊತ್ತಾಯಿತು. ನಾನು ಕೊಲೆಯಾದ ಸ್ಥಳಕ್ಕೆ ರಾತ್ರಿ ಸುಮಾರು 9.45 ಕ್ಕೆ ಹೋದೆನು. ಆ ಸಮಯದಲ್ಲಿ ಅಭಿನಯ ನನಗೆ ಫೋನ್ ಮಾಡಿ ನಾನು ಹೇಮಂತ್ ಕುಮಾರನಿಗೆ ಫೋನ್ ಮಾಡಿದರೂ ಸಹ ಹೇಮಂತ್ ಫೋನು ತೆಗೆಯುತ್ತಿಲ್ಲ ಎಂದು ಹೇಳಿದನು. ಆಗ ನಾನು ಅಭಿನಯನಿಗೆ ಈ ರೀತಿ ಹೇಮಂತ ಕುಮಾರನ ಕೊಲೆಯಾಗಿದೆ ಎಂದು ಹೇಳಿದೆನು.

4. ಹೇಮಂತನ ಕೊಲೆಯಾದ ವಿಚಾರ ತಿಳಿದು ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಹೇಮಂತನ ತಂದೆ, ಊರಿನ ಜನರು ಹಾಗೂ ಪೊಲೀಸರು ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿದರು. ನಾನು ಸ್ಥಳದಲ್ಲಿ ನೋಡಿದಾಗ ಹೇಮಂತ ಕುಮಾರ ಅಲ್ಲಿದ್ದ ಹಳ್ಳದಲ್ಲಿ ಬಿದ್ದಿದ್ದು ಆತನ ತಲೆ ಪೂರ್ವ ದಿಕ್ಕಿಗೆ ಇದ್ದು, ಆತನ ಕಾಲು ಪಶ್ಚಿಮ ದಿಕ್ಕಿಗೆ ಇದ್ದಿತು. ಆತನ ತಲೆಯ ಬಳಿ 2 ಸಿಮೆಂಟ್ ಇಟ್ಟಿಗೆಗಳು ಇದ್ದವು. ಸದರಿ ಇಟ್ಟಿಗೆಗಳಿಗೆ ರಕ್ತ ಹತ್ತಿತ್ತು. ಹೇಮಂತ ಕುಮಾರನ ಕಾಲಿನ ಬಲಾಭಾಗದ ಬಳಿ ಮಚ್ಚು ಬಿದ್ದಿತ್ತು. ಸ್ಥಳದಲ್ಲಿ ಬಿದ್ದಿದ್ದ ರಕ್ತವಾಗಿದ್ದ ಮಣ್ಣನ್ನು ಪೊಲೀಸರು ತೆಗೆದುಕೊಂಡರು.

5. ಆ ದಿನ ಸ್ಥಳಕ್ಕೆ ಬೈಕಿನಲ್ಲಿ ಹೇಮಂತ್ ಕುಮಾರ ಹಾಗೂ ಸುನಿಲ್ ಕುಮಾರ ಬಂದಿದ್ದರು ಎಂದು ನನಗೆ ಗೊತ್ತಾಯಿತು. ಸ್ಥಳದಲ್ಲಿ ಬಿದ್ದಿದ್ದ ಬೈಕು ಜಖಂಗೊಂಡಿತ್ತು. ಹೇಮಂತ್ ಕುಮಾರನ ತಲೆ ಜ್ಜಜಲ್ಪಟ್ಟಿತ್ತು, ಆತನ ಎರಡೂ ಕೈಗಳು ಕತ್ತರಿಸಲ್ಪಟ್ಟಿದ್ದವು, ಆತನ ದೇಹದಲ್ಲಿ 7-8 ಮಚ್ಚಿನಿಂದ ಹೊಡೆದ ಗುರುತುಗಳು ಇದ್ದವು. ಸುನಿಲ್ ಕುಮಾರ ಮೂರ್ಚೆ ಹೋಗಿದ್ದು, ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ನನಗೆ ಗುತ್ತಾಯಿತು. ಸ್ಥಳದಲ್ಲಿ ಮಹಜರನ್ನು ರಾತ್ರಿ 10.00 ರಿಂದ 11.00 ಗಂಟವರಗೂ ಮಾಡಿದರು. ಟಾರ್ಚ ಲೈಟ್ ಬೆಳಕಿನ ಸಹಾಯದಿಂದ ಆ ಸಮಯದಲ್ಲಿ ಮಹಜರನ್ನು ಬರೆದರು. ಸ್ಥಳದಲ್ಲಿದ್ದ ಮಚ್ಚು ದಿಂಡುಗಲ್ಲುಗಳನ್ನು ಪೊಲೀಸರು ತೆಗೆದುಕೊಂಡು ಅವುಗಳಿಗೆ ಚೀಟಿ ಅಂಟಿಸಿದರು. ಸ್ಥಳದಲ್ಲಿ ಫೋಟೋಗಳನ್ನು ತೆಗೆದರು. ರಾತ್ರಿ ಸುಮಾರು 11.00 ಗಂಟೆ ಹೊತ್ತಿಗೆ ಮೃತನ ಶವವನ್ನು ಪೊಲೀಸರು ಸ್ಥಳದಿಂದ ಮಂಡ್ಯದ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಮೃತ ಹೇಮಂತ ಕುಮಾರ ಧರಿಸಿದ್ದ ಬಟ್ಟೆಗಳಿಗೆ ರಕ್ತವಾಗಿತ್ತು. ನಂತರ ನಾನು ಮನೆಗೆ ಹೋದೆನು.

6. ಮರುದಿನ ನಾನು ಮಂಡ್ಯದ ಆಸ್ಪತ್ರೆಯ ಶಾವಾಗಾರದ ಬಳಿ ಹೋದೆನು. ಅಲ್ಲಿ ಪೊಲೀಸರು ಮಹಜರ್ ಮಾಡಿದರು. ಆ ಸಮಯದಲ್ಲಿ ಮೋಹನ್, ಕಿಟ್ಟಿ, ಅಭಿನಯ್, ಆನಂದ ಇತರರು ಶಾವವಗಾರದ ಬಳಿ ಬಂದಿದ್ದರು. ಅಲ್ಲಿಗೆ ಬಂದಿದ್ದ ಅಭಿನಯನು 23 ನೇ ಕಾಲುವೆ ಬಳಿ ಆರೋಪಿ ಪ್ರಸಾದ್, ಇಂದು ಕುಮಾರ್, ಸ್ವರೂಪ್ ಹಾಗೂ ಇತರೆ ಜನರು ಹೇಮಂತ ಕುಮಾರನನ್ನು ಹೊಡೆದು ತೀರಿಸಬೇಕು ಎಂದು ಮಾತನಾಡುತ್ತಿದ್ದರು ಎಂದು ನನಗೆ ಹೇಳಿದನು. ತಾನು ಡೈರಿಯ ಬಳಿ ಇದ್ದಾಗ ಸಂಜೆ 7.00 ರಿಂದ 7.15 ರ ಸಮಯದಲ್ಲಿ ಹೇಮಂತ್ ಬರುತ್ತಿದ್ದಾನೆ ಆತನನ್ನು ತೀರಿಸಿ ಎಂದು ಪ್ರಸಾದ್ ಪೋನಿನಲ್ಲಿ ಹೇಳುತ್ತಿದ್ದ ಎಂದು ಆನಂದ್ ನನಗೆ ಹೇಳಿದನು. ನಂತರ ಶವವನ್ನು ನಮ್ಮ ಊರಿಗೆ ತಂದರು.

7. ಪೊಲೀಸರು 11 ನೇ ತಾರೀಖಿನಂದು ಏನಾಯಿತು ಎಂದು ಕೇಳಲು ನನ್ನನ್ನು ಕರೆದಿದ್ದರು. 11 ನೇ ತಾರೀಖಿನಂದು ಶವ ಸಂಸ್ಕಾರ ಇದ್ದು, ನಾನು ಆ ದಿನ ಪೊಲೀಸ್ ಠಾಣೆಗೆ ಹೋಗಲಿಲ್ಲ, ಆದರೆ 12 ನೇ ತಾರೀಖಿನಂದು ಹೋದೆನು. ಆ ಸಮಯದಲ್ಲಿ ನಾನು ಈ ದಿನ ಇಲ್ಲಿ ಹೇಳಿದ ವಿಚಾರಗಳನ್ನು ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹೇಳಿದ್ದೆನು.

8. ಘಟನಾಸ್ಥಳದಲ್ಲಿ ಪೋಲಿಸರು ಮಹಜರ್ ಮಾಡಿ ನನ್ನ ಮತ್ತು ಅಭಿನಯನ ಸಹಿಗಳನ್ನು ಮಹಜರಿಗೆ ತೆಗೆದುಕೊಂಡರು. ನಿಪಿ-40 ನೋಟೀಸು ಹಾಗೂ ನಿಪಿ.2 ಸ್ಥಳ ಮಹಜರಿನಲ್ಲಿರುವ ತಮ್ಮ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾ. ಸಹಿಗಳನ್ನು ಕ್ರಮವಾಗಿ ನಿಪಿ.40(ಬಿ) ಹಾಗೂ ನಿಪಿ-2(ಸಿ) ಎಂದು ಗುರುತಿಸಲಾಯಿತು. ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂಒ -1 ರಿಂದ 3, 9 ಹಾಗೂ 10 ನ್ನು ನೋಡಿ ಗುರುತಿಸಿರುತ್ತಾರೆ.

9. ಮೃತ ಹೇಮಂತ ಕುಮಾರನ ದೇಹದ ಮೇಲೆ ಇದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂಒ-4 ಮತ್ತು 6 ನ್ನು ನೋಡಿ ಗುರುತಿಸಿರುತ್ತಾರೆ. ಕ್ರಿಕೆಟ್ ವಿಚಾರ ಹಾಗೂ ಟೆಂಡರ್ ವಿಚಾರದಲ್ಲಿ ಹೇಮಂತ್ ಕುಮಾರನ ಕೊಲೆಯಾಯಿತು ಎಂದು ನನಗೆ ಗೊತ್ತಾಯಿತು.

<u>ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ. ಸಿ ಪಿ ವಕೀಲರಿಂದ :</u>

10. ನನ್ನ ವಿರುದ್ದ ಒಂದು ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ನನ್ನ ಮತ್ತು ಆರೋಪಿ ಇಂದು ಕುಮಾರನ ನಡುವೆ ಒಂದು ಕೇಸು ಆಗಿದೆ. ಟೆಂಡರ್ ವಿಚಾರದಲ್ಲಿ ನಮ್ಮ ಮನೆಯ ಮುಂದೆ ಇದ್ದ ಕಾರಿಗೆ ಕಲ್ಲು ಹಾಕಿದ್ದ ವಿಚಾರದಲ್ಲಿ ಸದರಿ ಕೇಸು ಆಗಿದೆ ಹಾಗೂ ನನ್ನ ಮೇಲೆ ಹಲ್ಲೆಯೂ ಅಗಿದೆ.

11. ನಾನು ಪೊಲೀಸರ ಮುಂದೆ ಒಂದು ಭಾರಿ ಮಾತ್ರ ಅಂದರೆ 12 ನೇ ತಾರೀಖಿನಂದು ಹೇಳಿಕೆ ಕೊಟ್ಟಿರುತ್ತೇನೆ. ನಾನು ಜುಲೈ ತಿಂಗಳಿನಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ನನ್ನ ಮತ್ತು ಇಂದು ಕುಮಾರನ ಮನೆಯವರ ನಡುವೆ ನೀರಿನ ಕ್ಷುಲ್ಲಕ ವಿಚಾರದಲ್ಲಿ ಗಲಾಟೆಯಾಯಿತೇ ಹೊರತು ಟೆಂಡರ್ ವಿಚಾರದಲ್ಲಿ ಯಾವುದೇ ಗಲಾಟೆಯಾಗಿರಲಿಲ್ಲ ಎಂದರೆ ಸರಿಯಲ್ಲ.

12. ಇಂದು ಕುಮಾರನು ಯಾರ ಹೆಸರಿನಲ್ಲಿ ಟೆಂಡರು ತೆಗೆದುಕೊಂಡು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಇಂದು ಕುಮಾರ ಬೇರೆಯವರ ಹೆಸರಿನಲ್ಲಿ ಟೆಂಡರ್ ತೆಗೆದುಕೊಂಡು ತಾನು ಕೆಲಸ ಮಾಡುತ್ತಿದ್ದ ಎಂದು ಹೇಳಿಲ್ಲ ಎಂದರೆ ನಾನು ಕೇವಲ ಟೆಂಡರ್ ವಿಚಾರದಲ್ಲಿ ಗಲಾಟೆಯಾಯಿತು ಎಂದು ಮಾತ್ರ ಹೇಳಿದ್ದು, ಟೆಂಡರ್ ಇಂದು ಕುಮಾರನದೇ ಎಂದು ಸಹ ನಾನು ಹೇಳಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹೇಮಂತ ಕುಮಾರ ನನ್ನ ಹೆಸರಿನಲ್ಲಿ ಟೆಂಡರು ತೆಗೆದುಕೊಂಡಿದ್ದ ವಿಚಾರವನ್ನು ಹೇಳಿರುತ್ತೇನೆ. ನಾನು ಆ ರೀತಿ ಪೊಲೀಸರ ಮುಂದ ಹೇಳಿಕೆ ಕೊಟ್ಟಿಲ್ಲ ಹಾಗೂ ಹೇಮಂತ ಕುಮಾರ ತನ್ನ ಹೆಸರಿನಲ್ಲಿ ಕಡಿಮೆ ರೇಟಿನಲ್ಲಿ ಟೆಂಡರು ತೆಗೆದುಕೊಂಡಿದ್ದ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಇಂದು ಕುಮಾರ ತನ್ನ ಹೆಸರಿನಲ್ಲಿ ಆಗಲೀ ಅಥವಾ ಬೇರಯವರ ಹೆಸರಿನಲ್ಲಿ ಟೆಂಡರ್ ತೆಗೆದುಕೊಂಡು ಹಾಲಿನ ಸರಬರಾಜು ಮಾಡುವ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

13. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ದಿಃ 09.05.2021 ರಂದು ನಾನು ಹಾಲಿನ ಡೈರಿಯಿಂದ ನಮ್ಮ ಮನೆಗೆ ಹೋಗುತ್ತಿದ್ದಾಗ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ಗಲಾಟೆಯಾಗುತ್ತಿತ್ತು ಎಂದು ಹೇಳಿಲ್ಲ ಎಂದರೆ ಪೋಲಿಸರು ಸದರಿ ವಿವರ ಕೇಳಲಿಲ್ಲ ಕೇವಲ ಎಲ್ಲಿ ಗಲಾಟೆಯಾಯಿತು ಎಂದು ಕೇಳಿದರು ನಾನು ಅದನ್ನು ಹೇಳಿದೆ ಎಂದು ನುಡಿದಿದ್ದಾರೆ. ದಿಃ 09.05.2021 ರ ಸಮಯದಲ್ಲಿ ಕೋವಿಡ್ ನಿಂದಾಗಿ ಲಾಕ್ಡೌನ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಪೋಲಿಸರು ಇರುತ್ತಿದ್ದು, ಜನರು ಗುಂಪಾಗಿ ಸೇರಲು ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೇ 2021 ರ ಸಮಯದಲ್ಲಿ ಕೋವಿಡ್ ಸಾಂಕ್ರಾಮಿಕ ಹರಡಿದ್ದರಿಂದ ಯಾರೂ ಕ್ರಿಕೆಟ್ ಆಡುತ್ತಿರಲಿಲ್ಲ ಎಂದರೆ ಸಾಕ್ಷಿ ನಮ್ಮ ಊರಿನಲ್ಲಿ ಸ್ವಲ್ಪ ಜನ ಆಡುತ್ತಿದ್ದರು ಎಂದು ನುಡಿದಿದ್ದಾರೆ.

14. ಹೇಮಂತ ಕುಮಾರನ ಶವ ಪರೀಕ್ಷೆ ನಡೆದ ದಿನ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಶವ ಪರೀಕ್ಷಾ ಸಮಯದಲ್ಲಿ ಕ್ರಿಕೆಟ್ ವಿಚಾರದಲ್ಲಿ ಗಲಾಟೆಯಾಗಿತ್ತು ಎಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ.

15. 11 ನೇ ತಾರೀಖು ಶಾವಾಗಾರದ ಬಳಿ ನಾನು ಹೋದಾಗ ಬೆಳಿಗ್ಗೆ 10.30 ರಿಂದ 11.00 ಗಂಟೆಯಾಗಿತ್ತು. ಆ ಸಮಯದಲ್ಲಿ ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ. ಆ ದಿನ 11.00 ಗಂಟೆಯ ನಂತರ ಅಭಿನಯ ನನಗೆ ಸಿಕ್ಕಿದ್ದನು. 23 ನೇ ಕಾಲುವೆಯ ಬಳಿ ಆರೋಪಿಗಳು ಮಾತನಾಡಿಕೊಳ್ಳುತಿದ್ದ ವಿಚಾರವನ್ನು ಅಭಿನಯ ನನಗೆ ಹೇಳಿದನು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುವುದಿಲ್ಲ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹೇಮಂತ ಕುಮಾರ ಡೈರಿಯಿದ ಹೋಗುತಿದ್ದುದನ್ನು ನೋಡಿದ 5 ನೇ ಆರೋಪಿ ಪ್ರಸಾದ್ ಯಾರಿಗೋ ಪೋನ್ ಮಾಡಿ ಹೇಮಂತ ಬರುತ್ತಿದ್ದಾನೆ ಅವನನ್ನು ಮುಗಿಸಿಬಿಡಿ ಎಂದು ಹೇಳಿದ್ದನ್ನು ನಾನು ಕೇಳಿಸಿಕೊಂಡೆ ಎಂದು ಆನಂದ ನನಗೆ ಹೇಳಿದ ಎಂದು ನಾನು ಹೇಳಿರುವುದಿಲ್ಲ. ಆನಂದ ಹಾಗೂ ಅಭಿನಯ ಮೇಲೆ ಹೇಳಿದ ಯಾವುದೇ ವಿಚಾರಗಳನ್ನು ನನಗೆ ಹೇಳಿಲ್ಲ ಎಂದರೆ ಸರಿಯಲ್ಲ.

16. ಮದ್ದೂರಿನಿಂದ ಮೈಸೂರಿಗೆ ಹೋಗಬೇಕಾದರೆ  ನಮ್ಮ ಊರಿನ ಬಳಿ ರಸ್ತೆಯಲ್ಲಿ ಬಲಕ್ಕೆ ತಿರುವು ತೆಗದುಕೊಂಡು ನಂತರ ಎಡಕ್ಕೆ ತಿರುಗಿ ಎಸ್ ಆಕಾರದಲ್ಲಿ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿ ಅಷ್ಟೊಂದು ತಿರುವು ಇಲ್ಲ, ಸ್ವಲ್ಪ ತಿರುವು ಇದೆ ಎಂದು ನುಡಿದಿದ್ದಾರೆ. ಮದ್ದೂರಿನಿಂದ ಬರುವಾಗ ನಮ್ಮ ಊರಿಗೆ ತಿರುಗಿಕೊಳ್ಳುವ  ರಸ್ತೆಯಲ್ಲಿ ನಿಂತರೆ ಹೆದ್ದಾರಿಯಿಂದ ನಮ್ಮ ಊರಿನ ರಸ್ತೆಯ ತುದಿ ಕಾಣುವುದಿಲ್ಲ ಎಂದರೆ ಸರಿಯಲ್ಲ.

17. ಕೆ ಎಂ ಎಫ್ ನೀರಿನ ಹಳ್ಳವು ವಿಶ್ವೇಶ್ವರಯ್ಯ ಸ್ಟಾಚ್ಯು ನಿಂದ ಸುಮಾರು ಕಾಲು ಕಿಮಿ ದೂರದಲ್ಲಿದೆ. ಶವ ಬಿದ್ದಿದ್ದ ಸ್ಥಳದಿಂದ ಕೆ ಎಂ ಎಫ್ ನೀರಿನ ಹಳ್ಳ ಸುಮಾರು 20 ಮೀಟರ್ ದೂರದಲ್ಲಿದೆ.  ವಿಶ್ವೇಶ್ವರಯ್ಯ ಸ್ಟಾಚ್ಯು ನಿಂದ ಕೆ ಎಂ ಎಫ್ ನೀರಿನ ಹಳ್ಳದ ಕಡೆಗಿನ  ರಸ್ತೆ ಏರುಮುಖವಾಗಿದೆ ಎಂದರೆ ಸರಿ. ರಸ್ತೆಯಿಂದ ಮೂರುವರೆಯಿಂದ ನಾಲ್ಕು ಅಡಿ ಆಳದಲ್ಲಿ ಇರುವ ಹಳ್ಳದಲ್ಲಿ ಹೇಮಂತನ ಶವ ಬಿದ್ದಿತ್ತು. ಘಟನೆ ನಡೆದ ಸಮಯದಲ್ಲಿ ನಮ್ಮ ಊರಿನ ಬಳಿ ಬೆಂಗಳೂರು ಮೈಸುರು ಹೆದ್ದಾರಿ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ಶವ ಬಿದ್ದಿದ್ದ ಸ್ಥಳದಿಂದ ವಿಶ್ವೇಶ್ವರಯ್ಯ ಸ್ಟಾಚ್ಯು ಎಷ್ಟು ದೂರದಲ್ಲಿದೆ ಎಂದು ಪೊಲೀಸರು ಮಹಜರ್ ಕಾಲದಲ್ಲಿ ಅಳತೆ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಸ್ಥಳಗಳ ನಡುವಿನ ಅಂತರ ಅಂದಾಜು 70 ಮೀಟರ್ ಆಗುತ್ತದೆ.

18. ಹೇಮಂತ ಕುಮಾರ ಶವ ಬಿದ್ದಿದ್ದ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ಒಂದು ಮನೆ ಇದೆ. ಆದರೆ ಸದರಿ ಮನೆ ಯಾರದು ಎಂದು ನನಗೆ ಗೊತ್ತಿಲ್ಲ. ನಮ್ಮ ಊರಿನ ಕೆಲವು ಜನರು ನನಗೆ ಗೊತ್ತು ಹಾಗೂ ಕೆಲವು ಜನರ ಪರಿಚಯ ನನಗೆ ಇಲ್ಲ. ಹೇಮಂತ ಕುಮಾರ ಶವ ಬಿದಿದ್ದ ಸ್ಥಳದಿಂದ

ವಿಶ್ವೇಶ್ವರಯ್ಯ ಸ್ವಾಚ್ಯು ಇರುವ ಸ್ಥಳದ ನಡುವೆ 2-3 ಮನೆಗಳು ಇವೆ. ಸದರಿ ಮನೆಗಳಲ್ಲಿ ವಾಸವಿರುವವರು ಯಾರು ಯಾರು ಎಂದು ನನಗೆ ಗೊತ್ತಿಲ್ಲ.

19. ಶವ ಬಿದ್ದಿದ್ದ ಸ್ಥಳದಿಂದ 70 ಮೀಟರ್ ಇಟ್ಟಿಗೆ ಕಾರ್ಖಾನೆ ಇದೆ. ಶವ ಬಿದ್ದಿದ್ದ ಸ್ಥಳದಿಂದ ಮೊದಲು ಕೆ ಎಂ ಎಫ್ ಹಳ್ಳ ಸಿಗುತ್ತದೆ ನಂತರ ಇಟ್ಟಿಗೆ ಕಾರ್ಖಾನೆ ಸಿಗುತ್ತದೆ. ಸದರಿ ಇಟ್ಟಿಗೆ ಕಾರ್ಖಾನೆ ಬಳಿ ಲಾರಿಗಳನ್ನು ನಿಲ್ಲಿಸುವ ಯಾರ್ಡ್ ಇದೆ ಎಂದರೆ ಸರಿಯಲ್ಲ. ಹಾಲಿನ ಡೈರಿ ಸುತ್ತಮುತ್ತ ಹಾಲು ಸರಬರಾಜು ಮಾಡುವ ಸುಮಾರು 500 ಲಾರಿಗಳು ನಿಂತಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಸುಮಾರು 50 ಲಾರಿಗಳು ಮಾತ್ರ ನಿಂತಿರುತ್ತವೆ ಎಂದು ನುಡಿದಿದ್ದಾರೆ.

20. ಡೈರಿಯಿಂದ ಗೆಜ್ಜಲಗರೆ ಗ್ರಾಮದ ಕಡೆಗೆ ಹಾಲು ಸರಬರಾಜು ಮಾಡುವ ವಾಹನಗಳು ರಸ್ತೆಯ ಎಡಭಾಗದಲ್ಲಿ ಸಾಲಾಗಿ ನಿಂತಿರುತ್ತವೆ ಎಂದರೆ ಬೆಳಗಿನ ಹೊತ್ತಿನಲ್ಲಿ ಆ ರೀತಿ ನಿಂತಿರುತ್ತವೆ ಆದರೆ ಸಂಜೆಯ ಸಮಯದಲ್ಲಿ ಆ ರೀತಿ ನಿಂತಿರುವುದಿಲ್ಲ ಎಂದು ನುಡಿದಿದ್ದಾರೆ. ಊರುಗಳಿಂದ ಹಾಲನ್ನು ಸಂಗ್ರಹಿಸಿ ತೆಗೆದುಕೊಂಡು ಬರುವ ಲಾರಿಗಳು ಡೈರಿಗೆ ಸಂಜೆ 7.30 ರಿಂದ 10.00 ಗಂಟೆಯವರೆಗೂ ಬರುತ್ತಿರುತ್ತವೆ. ಮೃತನ ಶವದಿಂದ 2-3 ಮೀಟರ್ ದೂರದಲ್ಲಿ ಮೃತನು ಓಡಿಸುತ್ತಿದ್ದ ಬೈಕು ಬಿದ್ದಿತ್ತು. ಶವ ಬಿದಿದ್ದ ಹಳ್ಳದಲ್ಲಿಯೇ ಸದರಿ ಬೈಕು ಬಿದಿದ್ದತ್ತು.

21. ನನ್ನ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿ ಇಂದು ಕುಮಾರನ ಮೇಲಿರುವ ದ್ವೇಷದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u> ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಸಮಂಡ್ಯ.